# ವಾರ್ಷಿಕ ವರದಿ: 2010–11
# ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆ
# ಜಲ ಸಂವರ್ಧನೆ ಯೋಜನಾ ಸಂಘ

**ಪರಿಚಯ :**

ಕರ್ನಾಟಕ ಸರ್ಕಾರವು ರಾಜ್ಯದ ಸಾಂಪ್ರಾದಾಯಿಕ ಕೆರೆಗಳನ್ನು ಸಮುದಾಯ ಸಹಭಾಗಿತ್ವದ ಮೂಲಕ ಪುನಃಶ್ಚೇತನಗೊಳಿಸಲು ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯನ್ನು ವಿಶ್ವಬ್ಯಾಂಕಿನ ನೆರವಿನೊಂದಿಗೆ ಕೈಗೆತ್ತಿಕೊಂಡಿದೆ. ಈ ಯೋಜನೆಯನ್ನು ಸಂಪೂರ್ಣವಾಗಿ ಸಮುದಾಯ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸಮುದಾಯಕ್ಕೆ ಬೇಕಾದ ಸಾಮರ್ಥ್ಯವರ್ಧನೆಯನ್ನು ತರಬೇತಿಗಳ ಮೂಲಕ ನೀಡಲಾಗುವುದು. ಗ್ರಾಮೀಣ ಸಹಭಾಗಿತ್ವ ಅಧ್ಯಯನ (P.R.A) ಮೂಲಕ ಸಮುದಾಯವರಿಂದ ಸಮಗ್ರ ಕೆರೆ ಅಭಿವೃದ್ಧಿ ಯೋಜನೆ (ಐ.ಟಿ.ಡಿ.ಪಿ)ಯನ್ನು ತಯಾರಿಸಲಾಗುತ್ತದೆ. ಕೆರೆಗಳಿಗೆ ಅವಶ್ಯವಿರುವ ಕಾಮಗಾರಿ ಹಾಗೂ ಇತರ ಅಭಿವೃದ್ಧಿ ಚಟುವಟಿಕೆಗಳನ್ನು ಸಮುದಾಯವೇ ಗುರುತಿಸಿ ಯೋಜನೆಯನ್ನು ತಯಾರಿಸುತ್ತವೆ. ಅನುಷ್ಠಾನಗೊಳಿಸಲು ಅಗತ್ಯವಿರುವ ಹಣವನ್ನು ಸಮುದಾಯದಿಂದಲೇ ರಚಿತವಾದ ಕೆರೆ ನಿರ್ವಹಣಾ ಸಂಘಗಳಿಗೆ ನೇರವಾಗಿ ಬಿಡುಗಡೆ ಮಾಡಲಾಗುತ್ತದೆ. ಕೆರೆ ನಿರ್ವಹಣಾ ಸಂಘಗಳು ಯೋಜನೆಯ ಅನುಷ್ಠಾನದ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿವೆ. ಇವುಗಳಿಗೆ ಜಲ ಸಂವರ್ಧನೆ ಯೋಜನಾ ಸಂಘದ ಸಮೂಹ ಮಾರ್ಗದರ್ಶನ ತಂಡಗಳು ಹಾಗೂ ಜಿಲ್ಲಾ ಯೋಜನಾ ಘಟಕಗಳು ಮಾರ್ಗದರ್ಶನ ನೀಡುತ್ತವೆ. ಈ ಯೋಜನೆಯು ಮೂರು ಹಂತಗಳನ್ನು ಹೊಂದಿದ್ದು ಅವುಗಳೆಂದರೆ, ಮೊದಲ ಹಂತದ (2005 ಕೆರೆ) ಯೋಜನೆ, ಮೊದಲ ಹಂತದ ವಿಸ್ತರಣಾ (694 ಕೆರೆ) ಯೋಜನೆ ಹಾಗೂ ಎರಡನೇ ಹಂತದ ಹೆಚ್ಚುವರಿ ಹಣಕಾಸಿನ (1224 ಕೆರೆ) ಯೋಜನೆ(ಮುಂದುವರೆದ ಯೋಜನೆ).

**ಯೋಜನೆಯ ಉದ್ದೇಶ:**

ಸಮುದಾಯಾಧಾರಿತ ಸುಸ್ಥಿರ ಸಂಸ್ಥೆಗಳನ್ನು ಸ್ಥಾಪಿಸಿ, ಅವುಗಳ ಮೂಲಕ ಕೆರೆಗಳ ನಿರ್ವಹಣಾ ಕಾರ್ಯವನ್ನು ಕೈಗೆತ್ತಿಕೊಂಡು, ಗ್ರಾಮೀಣ ಜನತೆಯ ಬದುಕನ್ನು ಸುಧಾರಿಸಿ ಬಡತನವನ್ನು ಕಡಿಮೆಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

**ಯೋಜನೆಯ ತಾಲೂಕುಗಳ ಆಯ್ಕೆ:**

ಬಡತನ ರೇಖೆಗಿಂತ ಕೆಳಗಿರುವ ಜನರ ಶೇಕಡವಾರು ಸಂಖ್ಯೆ, ಪರಿಶಿಷ್ಟ ಜಾತಿ/ಬುಡಕಟ್ಟು ಜನರ ಶೇಕಡಾವಾರು ಸಂಖ್ಯೆ, ಸಣ್ಣ ಮತ್ತು ಅತೀ ಸಣ್ಣ ರೈತರ, ಭೂರಹಿತ ಶೇಕಡಾವಾರು ಜನಸಂಖ್ಯೆ, ಮಹಿಳಾ ಸಾಕ್ಷರತೆ, ಕೆರೆಗಳ ಸಾಂದ್ರತೆ ಮುಂತಾದ ವಸ್ತುನಿಷ್ಠ ಆಧಾರಗಳ ಮೇಲೆ ಕೆರೆಗಳನ್ನು ಸಮಗ್ರ ಪುನಶ್ಚೇತನಕ್ಕಾಗಿ ಆಯ್ಕೆ ಮಾಡಲಾಗಿದೆ. ಸಮುದಾಯ ಆಧಾರಿತ ಪರಿಕಲ್ಪನೆ ಕೆರೆ ನಿರ್ವಹಣೆ ಯೋಜನೆಗೆ ಹೊಸದಾಗಿದ್ದು, ಇದನ್ನು ಪ್ರಾಯೋಗಿಕ ಯೋಜನೆಯೆಂದು ಪರಿಗಣಿಸಲಾಗಿದೆ.

**ಯೋಜನೆಯ ಸಾಂಸ್ಥಿಕ ಅಂಗ ರಚನೆ:**

ಜಲ ಸಂವರ್ಧನೆ ಯೋಜನಾ ಸಂಘದ ಆಡಳಿತ ಪರಿಷತ್‌ಗೆ ಮಾನ್ಯ ಸಣ್ಣ ನೀರಾವರಿ ಸಚಿವರು ಅಧ್ಯಕ್ಷರಾಗಿದ್ದು, ಕಾರ್ಯಕಾರಿ ಸಮಿತಿಗೆ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಅಧ್ಯಕ್ಷರಾಗಿರುತ್ತಾರೆ. ರಾಜ್ಯ ಮಟ್ಟದಲ್ಲಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕರ ನೇತೃತ್ವದಲ್ಲಿ ಯೋಜನೆಯು ಅನುಷ್ಠಾನಗೊಳ್ಳುತ್ತದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ನೇತೃತ್ವದಲ್ಲಿ ಯೋಜನೆ ಅನುಷ್ಠಾನಗೊಳ್ಳುತ್ತದೆ.

**ಯೋಜನೆಯ ನಿರೀಕ್ಷೆಗಳು:**

1. ಸಮುದಾಯ ಸಹಭಾಗಿತ್ವದ ಸುಸ್ಥಿರ ಕೆರೆ ನಿರ್ವಾಹಣಾ ಸಂಘಗಳ ಸ್ಥಾಪನೆ ಮತ್ತು ಮುಂದುವರಿಕೆ
2. ಎಲ್ಲಾ ವರ್ಗ ಮತ್ತು ಪಂಗಡಗಳ ವ್ಯಕ್ತಿಗಳ ಅರ್ಥಪೂರ್ಣ ಭಾಗವಹಿಸುವಿಕೆ.
3. ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ
4. ಸಮುದಾಯವನ್ನು ಸಾಮಾಜಿಕ ಹಾಗೂ ಆರ್ಥಿಕವಾಗಿ ಸಬಲಗೊಳ್ಳುವುದು.
5. ಕೆರೆ ಮುಂದಿನ ನಿರ್ವಹಣೆಗೆ ಸಂಪನ್ಮೂಲದ ಕ್ರೂಡೀಕರಣ.

**ಮೊದಲ ಹಂತದ ಯೋಜನೆ (ಹಂತ–I):**

ಈ ಯೋಜನೆಯ ಅನುಷ್ಠಾನವು ದಿನಾಂಕ 08.07.2002 ರಿಂದ ಚಾಲನೆಗೆ ಬಂದಿರುತ್ತದೆ. ಈ ಯೋಜನೆಯ ಮೊದಲನೇ ಹಂತದಲ್ಲಿ ಆರು ಕೃಷಿ ಭೌಗೋಳಿಕ ವಲಯಗಳಲ್ಲಿ ಬರುವ 10 ಜಿಲ್ಲೆಗಳ 34 ತಾಲ್ಲೂಕುಗಳಲ್ಲಿನ 2005 ಕೆರೆಗಳನ್ನು ಪುನಃಶ್ಚೇತನಗೊಳಿಸುವ ಕಾರ್ಯಕ್ರಮ ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯಿಂದ ಸುಮಾರು 72,000 ಹೆ. ಅಚ್ಚುಕಟ್ಟು ಪ್ರದೇಶವನ್ನು ಅಭಿವೃದ್ಧಿಗೊಳಿಸುವ ಗುರಿ ಹೊಂದಿದೆ. ಯೋಜನೆಯನ್ನು ಸಮುದಾದ ಮುಖಾಂತರವೇ ರೂಪಿಸುವ ಅಭಿವೃದ್ಧಿಗೊಳಿಸುವ ಮತ್ತು ಅನುಷ್ಠಾನಗೊಳಿಸುವ ವಿಶಿಷ್ಠ ಉದ್ದೇಶವನ್ನು ಹೊಂದಿದೆ. ಇದುವರೆಗೆ 63 ಹೆ. ಅಚ್ಚುಕಟ್ಟು ಹೊಂದಿರುವ 1829 ಕೆರೆಗಳನ್ನು ಅಭಿವೃದ್ಧಿಪಡಿಸಲು ಕೈಗೆತ್ತಿಕೊಳ್ಳಲಾಗಿದೆ. ಯೋಜನೆಯು 31.01.2009 ರಂದು ಮುಕ್ತಾಯಗೊಳ್ಳಬೇಕಿತ್ತು, ಆದರೆ ಉಳಿದ 176 ಕೆರೆ ಹಾಗೂ ಈಗಾಗಲೆ ಕೈಗೆತ್ತಿಕೊಂಡಿರುವ ಕೆರೆಗಳಲ್ಲಿ ಬಾಕಿ ಇರುವ ಸಣ್ಣ ಪುಟ್ಟ ಕೆಲಸಗಳನ್ನು ಪೂರ್ಣಗೊಳಿಸಲು ಯೋಜನೆ ಅವಧಿಯನ್ನು ವಿಶ್ವ ಬ್ಯಾಂಕ್ 31.01.2012ರ ವರೆಗೆ ವಿಸ್ತರಿಸಿದೆ. 2005 ಕೆರೆಗಳಲ್ಲಿ ಬಾಕಿ ಉಳಿದಿರವ 176 ಕೆರೆಗಳ ಕೆಲಸ ಅಕ್ಟೋಬರ್ 2009 ರಿಂದ ಪ್ರಾರಂಭಿಸಲಾಗಿದೆ. ಮೊದಲ ಹಂತದ ಯೋಜನೆಗೆ ನಿಗದಿಪಡಿಸಿದ ರೂ. 508.63 ಕೋಟಿಗಳಲ್ಲಿ ರೂ. 330.69 ಕೋಟಿಗಳ ಖರ್ಚಿನಲ್ಲಿ ಪೂರ್ಣಗೊಳಿಸಲಾಗುವುದು. ಕೈಗೆತ್ತಿಕೊಳ್ಳಲಾಗಿರುವ 1829 ಕೆರೆಗಳ ಪೈಕಿ 85 ಕೆರೆಗಳನ್ನು ನಾನಾಕಾರಣಗಳಿಂದ ಕೈಬಿಡಲಾಗಿದೆ. ಇಲ್ಲಿಯವರೆಗೆ 1583 ಕೆರೆಗಳನ್ನು ಸಂಬಂಧಿಸಿದ ಕೆರೆ ಅಭಿವೃದ್ಧಿ ಸಂಘಗಳಿಗೆ ಹಸ್ತಾಂತರಿಸಿದ್ದು, ಉಳಿಕೆ ಕೆರೆಗಳನ್ನು ಹಸ್ತಾಂತರಿಸುವ ಕಾರ್ಯ ಪ್ರಗತಿಯಲ್ಲಿದೆ.

**ಎರಡನೇ ಹಂತದ ಹೆಚ್ಚುವರಿ ಹಣಕಾಸಿನ ಯೋಜನೆ (ಮುಂದುವರೆದ ಯೋಜನೆ):**

ವಿಶ್ವ ಬ್ಯಾಂಕಿನ ಹೆಚ್ಚುವರಿ ಆರ್ಥಿಕ ನೆರವಿನೊಂದಿಗೆ, 1224 ಕೆರೆಗಳನ್ನು ಪುನಶ್ಚೇತನಕ್ಕಾಗಿ ರಾಜ್ಯದ 8 ಜಿಲ್ಲೆಗಳ 37 ತಾಲ್ಲೂಕುಗಳಲ್ಲಿ ಆಯ್ಕೆ ಮಾಡಲಾಗಿದ್ದು, ಸುಮಾರು 53000 ಹೆ. ಹಾಲಿ ಇರುವ ಅಚ್ಚುಕಟ್ಟನ್ನು ಅಭಿವೃದ್ಧಿಪಡಿಸಲು ಯೋಜನೆಯನ್ನು ರೂಪಿಸಲಾಗಿದೆ. 2012 ನೇ ಇಸವಿಯೊಳಗೆ ಇವುಗಳನ್ನು ಅಭಿವೃದ್ಧಿ ಪಡಿಸುವ ಗುರಿಯನ್ನು ಹೊಂದಲಾಗಿದೆ. ಈ ಯೋಜನೆಯ ಒಟ್ಟು ಮೊತ್ತ ರೂ. 306.98 ಕೋಟಿಗಳಾಗಿರುತ್ತದೆ. ಮೇಲಿನ ಮೂರು ಹಂತಗಳ ಯೋಜನೆಗಳು 31.01.2012 ಕ್ಕೆ ಮುಕ್ತಾಯಗೊಳಿಸಲು ಯೋಜನೆ ರೂಪಿಸಲಾಗಿದೆ.

**ಯೋಜನಾ ಅನುಷ್ಠಾನ ವ್ಯವಸ್ಥೆ :**

**ಮೊದಲ ಹಂತದ ಯೋಜನೆ (ಹಂತ–I)**

ಮೊದಲ ಹಂತದ ಯೋಜನೆಯು 10 ಜಿಲ್ಲೆಗಳನ್ನು ಒಳಗೊಂಡಿದ್ದು, 9 ಜಿಲ್ಲಾ ಯೋಜನಾ ಘಟಕಗಳು (ಬಳ್ಳಾರಿ ಹಾಗೂ ಕೊಪ್ಪಳಗಳು ಸೇರಿ ಒಂದು ಯೋಜನಾ ಘಟಕ) ಕಾರ್ಯ ನಿರ್ವಹಿಸುತ್ತಿದ್ದು, ಜಿಲ್ಲಾ ಯೋಜನಾ ಸಮನ್ವಯಧಿಕಾರಿಗಳ ನೇತೃತ್ವದಲ್ಲಿ ತಾಂತ್ರಿಕ, ಹಣಕಾಸು, ಆಡಳಿತ, ಕೃಷಿ, ಮೀನುಗಾರಿಕೆ, ಪರಿಸರ, ಪರಿವೀಕ್ಷಣೆ ಮತ್ತು ಕಲಿಕೆ, ಜಲ ಸಂಪನ್ಮೂಲ, ಸಾಮಾಜಿಕ, ಸಂವಹನ ಇತ್ಯಾದಿ ಅಗತ್ಯವಿರುವ ತಂತ್ರಜ್ಞರುಗಳನ್ನು ನಿಯೋಜಿಸಲಾಗಿದೆ. ಜಿಲ್ಲಾ ಯೋಜನಾ ಘಟಕವು ಆಯಾಯ ಜಿಲ್ಲೆಗಳ ಆಡಳಿತಾತ್ಮಕ, ಯೋಜನೆಯ ಅನುಷ್ಠಾನದ ಹಾಗೂ ಪರಿವೀಕ್ಷಣೆ ಜವಾಬ್ದಾರಿಯನ್ನು ಹೊಂದಿರುತ್ತದೆ ಹಾಗೂ ರಾಜ್ಯ ಯೋಜನಾ ಘಟಕಕ್ಕೆ ಮಾಹಿತಿ ನೀಡುವ ಘಟಕಗಳಾಗಿ ಕಾರ್ಯನಿರ್ವಹಿಸುತ್ತದೆ.

ಯೋಜನಾ ಜಿಲ್ಲೆಗಳ ಯೋಜನೆ ಅನುಷ್ಠಾನದ ಪರಿವೀಕ್ಷಣೆಯ ಪೂರ್ಣ ಜವಾಬ್ದಾರಿ ರಾಜ್ಯ ಯೋಜನಾ ಘಟಕದ್ದಾಗಿರುತ್ತದೆ. ರಾಜ್ಯ ಯೋಜನಾ ಘಟಕದಲ್ಲಿ ತಾಂತ್ರಿಕ, ಹಣಕಾಸು, ಆಡಳಿತ, ಕೃಷಿ, ಮೀನುಗಾರಿಕೆ, ಪರಿಸರ, ಪರಿವೀಕ್ಷಣೆ ಮತ್ತು ಕಲಿಕೆ, ಸಾಮಾಜಿಕ, ಸಂವಹನ, ಮಾರುಕಟ್ಟೆ ಎನ್.ಜಿ.ಓ. ಇತ್ಯಾದಿ ವಿವಿಧ ವಿಭಾಗಗಳಿದ್ದು ಯೋಜನೆಯ ದಿನನಿತ್ಯದ ನಿರ್ವಹಣೆಯನ್ನು ನಿಭಾಯಿಸಲಾಗುತ್ತಿದೆ.

ಮೊದಲ ಹಂತದ 2005 ಕೆರೆಗಳ ಗುರಿಗಳ ಪೈಕಿ 1829 ಕೆರೆಗಳನ್ನು ಕೈಗೆತ್ತಿಕೊಂಡಿದ್ದು ಇವುಗಳಲ್ಲಿ 85 ಕೆರೆಗಳನ್ನು ನಾನಾಕಾರಣಗಳಿಂದ ಕೈಬಿಡಲಾಗಿದೆ. ಇಲ್ಲಿಯವರೆಗೆ 1583 ಕೆರೆಗಳನ್ನು ಸಂಬಂಧಿಸಿದ ಕೆರೆ ಅಭಿವೃದ್ಧಿ ಸಂಘಕ್ಕೆ ಹಸ್ತಾಂತರಿಸಲಾಗಿದೆ. ಉಳಿಕೆ ಕೆರೆಗಳನ್ನು ಹಸ್ತಾಂತರಿಸುವ ಕಾರ್ಯ ಪ್ರಗತಿಯಲ್ಲಿದೆ.

**ತಾಂತ್ರಿಕ ಚಟುವಟಿಕೆ:**

ಕೆರೆಯ ತಾಂತ್ರಿಕ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಹಾಗೂ ಕೆರೆಯ ಭೌತಿಕ ಸ್ಥಿತಿಗತಿಯನ್ನು ತಿಳಿದು ಇಂಜಿನಿಯರುಗಳು ಅಂದಾಜುಗಳನ್ನು ತಯಾರಿಸಲು ಅನುಕೂಲವಾಗುವಂತೆ ಟೋಪೋಗ್ರಾಫಿಕ್ ಸರ್ವೆ ಏಜೆನ್ಸಿಗಳನ್ನು ನಿಯೋಜಿಸಲಾಗಿದ್ದು, 2014 ಕೆರೆಗಳ ಟೋಪೋಗ್ರಾಫಿಕ್ ಸರ್ವೆ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ. ಟೋಪೋಗ್ರಾಫಿಕ್ ಸರ್ವೆಯ ನಕಾಶೆಗಳನ್ನು ಆಧರಿಸಿ ಯೋಜನಾ ಜಿಲ್ಲೆಗಳಲ್ಲಿ ಸಮಗ್ರ ಕೆರೆ ಅಭಿವೃದ್ಧಿ ಯೋಜನೆ ತಯಾರಿಸಿ ಅನುಮೋದಿಸಿಕೊಂಡು ಕಾಮಗಾರಿಗಳನ್ನು ಅನುಷ್ಟಾನಗೊಳಿಸಲಾಗುತ್ತಿದೆ.

**ಗುಣಮಟ್ಟ ಪರೀಕ್ಷೆ:**

ಜಲ ಸಂವರ್ದನೆ ಯೋಜನಾ ಸಂಘದ ಎರಡನೇ ಹಂತದ ಯೋಜನೆಯಡಿ ಸುಮಾರು 2094 ಕೆರೆಗಳ ಪುನಃಶ್ಚೇತನಗೊಳಿಸುವ ಗುರಿ ಹೊಂದಿದ್ದು, ಅವುಗಳ ಪೈಕಿ ಸುಮಾರು 1890 ಕೆರೆಗಳ ಪುನಃಶ್ಚೇತನ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈ ಕೆರೆಗಳ ಗುಣಮಟ್ಟವನ್ನು ಮಾರ್ಚ್ 2010 ರಿಂದ ಮೆ.ಇಜಿಐಎಸ್ ಇಂಡಿಯಾ ಪ್ರೈ. ಲಿಮಿಟೆಡ್, ಫರಿದಾಬಾದ್ ರವರಿಂದ ಪರಿವೀಕ್ಷಣೆಗೆ ಒಳಗೊಂಡಿರುತ್ತದೆ.

**ಪುನರ್ವಸತಿ ಮತ್ತು ಪುನರ್‌ಸ್ಥಾಪನೆ:**

ಯೋಜನೆಯು ಈ ಕುರಿತು ಸವಿವರವಾದ ಕಾರ್ಯನೀತಿಯನ್ನು ಹೊಂದಿರುತ್ತದೆ. ಮಾರ್ಚ್ 2011 ರವರೆಗೆ 3721 ಅನುಮೋದನೆಗೊಂಡ ಐಟಿಡಿಪಿ.ಗಳ ಅನುಷ್ಠಾನದಲ್ಲಿ ಒತ್ತುವರಿ ಕುರಿತು ವಿಶ್ಲೇಷಣೆ ಮಾಡಲಾಗಿದೆ. ಒಟ್ಟು 1396 ಕೆರೆಗಳಲ್ಲಿ ಒತ್ತುವರಿ ಕಂಡುಬಂದಿದೆ. ಸುಮಾರು 2271.79 ಹೆಕ್ಟೇರ್ ಪ್ರದೇಶ 7,642 ಜನರಿಂದ ಒತ್ತುವರಿಯಾಗಿದೆ. ಒತ್ತುವರಿಯಾದ 2271.78 ಹೆಕ್ಟೇರ್ ಪ್ರದೇಶದಲ್ಲಿ 2025.19 ಹೆಕ್ಟೇರ್ ಪ್ರದೇಶವನ್ನು ಯೋಜನೆಯ ಅನುಷ್ಠಾನಕ್ಕಾಗಿ ಅವಶ್ಯಕತೆ ಇದ್ದು, ಯೋಜನೆಯ ನಿಯಮಾನುಸಾರ 6882 ಒತ್ತುವರಿದಾರರು ಸ್ವಯಂಪ್ರೇರಿತರಾಗಿ ಒತ್ತುವರಿ ಪ್ರದೇಶವನ್ನು ಬಿಟ್ಟುಕೊಟ್ಟಿರುತ್ತಾರೆ. ಹಾವೇರಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಎರಡು ಕೆರೆಗಳ ಪ್ರಕರಣಗಳನ್ನು ಕಾನೂನಿನ ಮುಖಾಂತರ ತೆರವುಗೊಳಿಸಲಾಗಿದೆ. ಯೋಜನೆಯ ಪುನರ್ವಸತಿ ನಿಯಮಾನುಸಾರ 714 ಒತ್ತುವರಿ ಕುಟುಂಬಗಳನ್ನು ಗುರುತಿಸಿ 528 ಪುನರ್ವಸತಿ ಕ್ರಿಯಾ ಯೋಜನೆ ತಯಾರಿಸಿ ರೂ. 1.77 ಕೋಟಿ ವೆಚ್ಚದಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ.

**ಬುಡಕಟ್ಟು ಅಭಿವೃದ್ಧಿ ಯೋಜನೆ:**

ಒಟ್ಟು 3126 ಕೆರೆ ನಿರ್ವಹಣಾ ಸಂಘಗಳಲ್ಲಿ 12,01,887 ಸದಸ್ಯರುಗಳಿದ್ದು, ಅವರುಗಳಲ್ಲಿ 2,12,521 ಪರಿಶಿಷ್ಠ ಜಾತಿ ಮತ್ತು 1,33,690 ಪರಿಶಿಷ್ಟ ಪಂಗಡದ ಸದಸ್ಯರಾಗಿರುತ್ತಾರೆ. ಹಾಗೂ 51,995 ಕಾರ್ಯಕಾರಿ ಸಮಿತಿಯ ಸದಸ್ಯರುಗಳ ಪೈಕಿ 10,062 ಪರಿಶಿಷ್ಟ ಜಾತಿ 6,794 ಪರಿಶಿಷ್ಟ ಪಂಗಡದ ಸದಸ್ಯರಾಗಿರುತ್ತಾರೆ ಮತ್ತು ಒಟ್ಟು 9,378 ಕೆರೆ ನಿರ್ವಹಣಾ ಸಂಘದ ಮುಖ್ಯ ಪದಾಧಿಕಾರಿಗಳ ಪೈಕಿ 1,303 ಪರಿಶಿಷ್ಟ ಜಾತಿ ಮತ್ತು 1,008 ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುತ್ತಾರೆ.

**ಆದಾಯೋತ್ಪನ್ನ ಚಟುವಟಿಕೆಗಳು:**

**ಮೊದಲನೆ ಹಂತದ ಯೋಜನೆ:**

ಮೊದಲನೆ ಹಂತದ ಯೋಜನೆಯಲ್ಲಿ ಒಟ್ಟು 1425 ಕೆರೆ ಬಳಕೆದಾರರ ಸಂಘಗಳಿಗೆ ಯೋಜನಾ ವತಿಯಿಂದ ಒಟ್ಟು ರೂ. 1433.59 ಲಕ್ಷಗಳು, ಬ್ಯಾಂಕ್ ಲಿಂಕೇಜ್ ಮುಖಾಂತರ ಒದಗಿಸಿದ ಹಣ ರೂ. 1292.46 ಲಕ್ಷಗಳು, ಹಾಗೂ ಸ್ವಸಹಾಯ ಸಂಘಗಳ ಮುಖಾಂತರ ಬಂಡವಾಳ ರೂ. 345.87 ಲಕ್ಷಗಳು ಒಟ್ಟು ರೂ 3076.98 ಲಕ್ಷಗಳು ಆದಾಯೋತ್ಪನ್ನ ಚಟುವಟಿಕೆಗಾಗಿ ವಿನಿಯೋಗಿಸಲಾಗಿದ್ದು, ಒಟ್ಟು 65158 ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದಾರೆ.

**ಮೊದಲನೆ ಹಂತದ ವಿಸ್ತರಣಾ ಯೋಜನೆ:**

ಮೊದಲನೆ ಹಂತದ ವಿಸ್ತರಣಾ ಯೋಜನೆಯಲ್ಲಿ ಒಟ್ಟು 762 ಕೆರೆ ಬಳಕೆದಾರರ ಸಂಘಗಳಿಗೆ ಯೋಜನಾ ವತಿಯಿಂದ ಒಟ್ಟು ಹಣ ರೂ. 850.25 ಲಕ್ಷಗಳು, ಬ್ಯಾಂಕ್ ಲಿಂಕೇಜ್ ಮುಖಾಂತರ ಒದಗಿಸಿದ ಹಣ ರೂ. 138.06 ಲಕ್ಷಗಳು, ಹಾಗೂ ಸ್ವಸಹಾಯ ಸಂಘಗಳ ಮುಖಾಂತರ ಬಂಡವಾಳ ರೂ. 277.13 ಲಕ್ಷಗಳು ಒಟ್ಟು ರೂ 1132.97 ಲಕ್ಷಗಳು ಆದಾಯೋತ್ಪನ್ನ ಚಟುವಟಿಕೆಗಾಗಿ ವಿನಿಯೋಗಿಸಲಾಗಿದ್ದು, ಒಟ್ಟು 17393 ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದಾರೆ.

**ಹೆಚ್ಚುವರಿ ಹಣಕಾಸಿನ ಯೋಜನೆ:**

ಹೆಚ್ಚುವರಿ ಹಣಕಾಸಿನ ಯೋಜನೆಯಲ್ಲಿ ಒಟ್ಟು 879 ಕೆರೆ ಬಳಕೆದಾರರ ಸಂಘಗಳಿಗೆ ಯೋಜನಾ ವತಿಯಿಂದ ಒಟ್ಟು ಹಣ ರೂ. 978.78 ಲಕ್ಷಗಳು, ಬ್ಯಾಂಕ್ ಲಿಂಕೇಜ್ ಮುಖಾಂತರ ಒದಗಿಸಿದ ಹಣ ರೂ. 15.65 ಲಕ್ಷಗಳು, ಹಾಗೂ ಸ್ವಸಹಾಯ ಸಂಘಗಳ ಮುಖಾಂತರ ಬಂಡವಾಳ ರೂ. 419.62 ಲಕ್ಷಗಳು ಒಟ್ಟು ರೂ 1414.05 ಲಕ್ಷಗಳು ಆದಾಯೋತ್ಪನ್ನ ಚಟುವಟಿಕೆಗಾಗಿ ವಿನಿಯೋಗಿಸಲಾಗಿದ್ದು, ಒಟ್ಟು 16099 ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದಾರೆ.

**ಲಿಂಗತ್ವ ಕ್ರಿಯಾ ಯೋಜನೆ:**

ಈ ಯೋಜನೆಯಲ್ಲಿ ಕೆರೆ ಅಭಿವೃದ್ಧಿ ಹಾಗೂ ನಿರ್ವಹಣೆಯಲ್ಲಿ ಸಮಾನ ಭಾಗಿದಾರರಾಗಿ ಪಾಲ್ಗೊಳ್ಳಲು ಮಹಿಳೆಯರಿಗೆ ಮಹತ್ವ ಪೂರ್ಣ ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ.

**ಮೊದಲನೆ ಹಂತದ ಯೋಜನೆ:**

ಮೊದಲನೆ ಹಂತದ ಯೋಜನೆಯಲ್ಲಿ ಒಟ್ಟು 5,73,630 ಫಲಾನುಭವಿಗಳಲ್ಲಿ 2,53,963 ಮಹಿಳೆಯರು ತರಬೇತಿಯನ್ನು ಪಡೆದಿದ್ದು, ಒಟ್ಟು 5,58,322 ಪದಾಧಿಕಾರಿಗಳಲ್ಲಿ, 2,66,334 ಮಹಿಳೆಯರು ಪದಾಧಿಕಾರಿಗಳಾಗಿರುತ್ತಾರೆ.

**ಮೊದಲನೆ ಹಂತದ ವಿಸ್ತೃತಾ ಯೋಜನೆ:**

ಮೊದಲನೆ ಹಂತದ ವಿಸ್ತರಣಾ ಯೋಜನೆಯಲ್ಲಿ ಒಟ್ಟು 2,90,369 ಪದಾಧಿಕಾರಿಗಳ ಪೈಕಿ 1,43,727 ಮಹಿಳಾ ಪದಾಧಿಕಾರಿಗಳಿದ್ದು, ಶೇಕಡ 49.49% ಪ್ರಾತಿನಿಧ್ಯ ಹೊಂದಿರುತ್ತಾರೆ. ಕಾರ್ಯಕಾರಿ ಸಮಿತಿಯ ಒಟ್ಟು 11,327 ಸದಸ್ಯರಲ್ಲಿ 5,359 ಮಹಿಳಾ ಸದಸ್ಯರಾಗಿದ್ದು, ಶೇಕಡ 47.31 ಪ್ರಾತಿನಿಧ್ಯ ಹೊಂದಿರುತ್ತಾರೆ

**ಹೆಚ್ಚುವರಿ ಹಣಕಾಸಿನ ಯೋಜನೆ:**

ಹೆಚ್ಚುವರಿ ಹಣಕಾಸಿನ ಯೋಜನೆಯಲ್ಲಿ ಒಟ್ಟು 3,13,512 ಪದಾಧಿಕಾರಿಗಳ ಪೈಕಿ 1,55,691 ಮಹಿಳಾ ಪದಾಧಿಕಾರಿಗಳಿದ್ದು, ಶೇಕಡ 49.66% ಪ್ರಾತಿನಿಧ್ಯ ಹೊಂದಿರುತ್ತಾರೆ. ಕಾರ್ಯಕಾರಿ ಸಮಿತಿಯ ಒಟ್ಟು 15,719 ಸದಸ್ಯರಲ್ಲಿ 7,402 ಮಹಿಳಾ ಸದಸ್ಯರಾಗಿದ್ದು, ಶೇಕಡ 47.08% ಪ್ರಾತಿನಿಧ್ಯ ಹೊಂದಿರುತ್ತಾರೆ.

**ಪರಿಸರ ನಿರ್ವಹಣೆ :**

ಪರಿಸರ ನಿರ್ವಹಣೆ ಯೋಜನೆಯು ಸುರಕ್ಷಿತ ಯೋಜನೆಗಳಲ್ಲಿ ಒಂದಾಗಿದೆ. ಐ.ಟಿ.ಡಿ.ಪಿಗಳಲ್ಲಿ ಅವಕಾಶ ಕಲ್ಪಿಸಲಾದ ವಿವಿಧ ಚಟುವಟಿಕೆಗಳ ಅನುಷ್ಠಾನದಿಂದ ಕೆರೆ ಸಿಸ್ಟಮ್ ಮೇಲೆ ಯಾವುದೇ ರೀತಿಯ ಋಣಾತ್ಮಕ ಪರಿಣಾಮವಾಗದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ಮುಖಾಂತರ ಧನಾತ್ಮಕ ಪರಿಣಾಮ ಬೀರುವಂತೆ ಎಚ್ಚರಿಕೆ ಕ್ರಮ ಕೈಗೊಳ್ಳುವ ಉದ್ದೇಶ ಪರಿಸರ ನಿರ್ವಹಣೆ ಯೋಜನೆ ಹೊಂದಿದೆ. 2010-11 ನೇ ಸಾಲಿನಲ್ಲಿ ಒಟ್ಟು 636 ಕೆರೆಗಳ ಮುಂದಂಡೆಗಳಲ್ಲಿ ಸುಮಾರು 7.84 ಲಕ್ಷ ಸಸಿಗಳನ್ನು ನೆಟ್ಟು ನೆಡುತೋಪು ಅಭಿವೃದ್ಧಿ ಪಡಿಸಲಾಗಿದೆ. 1196 ಕೆರೆ ಬಳಕೆದಾರರ ಸಂಘಗಳ ಸದಸ್ಯ ರೈತರುಗಳಿಗೆ ಅವರ ಜಮೀನಿನ ಬದುಗಳಲ್ಲಿ ನೆಟ್ಟು ಬೆಳೆಸಲು 14.22 ಲಕ್ಷ ವಿವಿಧ ಜಾತೆಯ ಸಸಿಗಳನ್ನು ಸರಬರಾಜು ಮಾಡಲಾಗಿದೆ. ಅಲ್ಲದೇ 313 ಕೆರೆಗಳ ಗಡಿ ಕಂದಕಗಳ ಮೌಂಡ್‌ಗಳ ಮೇಲೆ 1843 ಕೆ.ಜಿ ವಿವಿಧ ಜಾತಿಯ ಬೀಜಗಳನ್ನು ಬಿತ್ತನೆ ಮಾಡಲಾಗಿದೆ. ಸಾವಯವ ಕೃಷಿ ಉತ್ತೇಜನ ನೀಡಲು 176 ಎರೆಹುಳು ಗೊಬ್ಬರದ ಘಟಕಗಳನ್ನು ಸರಬರಾಜು ಮಾಡುವ ಮುಖಾಂತರ ಸಾವಯವ ಗೊಬ್ಬರ ಉತ್ಪಾಧನೆಗೆ ನೆರವು ನೀಡಲಾಗಿದೆ. ಸುಮೂರು 1.4 ಲಕ್ಷ ಘ.ಮೀ ನಷ್ಟು ಕೆರೆ ಹೂಳನ್ನು ರೈತರು ಕೃಷಿ ಭೂಮಿಗೆ ಗೊಬ್ಬರವಾಗಿ ಬಳಕೆಮಾಡಲು ಉತ್ತೇಜಿಸಲಾಗಿದೆ. ಇವುಗಳ ಜೊತೆಗೆ ಯೋಜನಾ ಸಿಬ್ಬಂದಿಗಳಿಗೆ ಹಾಗು ಟಿ.ಯು.ಜಿ ಸದಸ್ಯರುಗಳಿಗೆ ಕೆರೆ ಪರಿಸರವನ್ನು ಪರಿಣಾಮಕಾರಿಯಾಗಿ ಕಾಪಾಡಲು ಮತ್ತು ಅಭಿವೃದ್ಧಿ ಪಡಿಸಲು ತರಬೇತಿ ನೀಡುವ ಮುಖಾಂತರ ಅರಿವು ಮೂಡಿಸಲಾಗಿದೆ. ಪ್ರವಾಸಗಳನ್ನು ಏರ್ಪಡಿಸಿ ತೋರಿಸಲಾಗಿದೆ. 83 ಸಮಗ್ರ ಪೀಡೆ ನಿರ್ವಹಣೆ ಪ್ರಾತ್ಯಕ್ಷಿಕೆ ಮುಖಾಂತರ ಪರಿಸರ ಸ್ನೇಹಿ ಕೀಟನಾಶಕಗಳು ಮತ್ತು ಗೊಬ್ಬರಗಳಾದ ಎರೆಹುಳು ಗೊಬ್ಬರ, ರೈಜೋಬಿಯಂ, ಅಜಟೋಬ್ಯಾಕ್ಟರ್, ಅಜೋಸ್ಪೈರುಲಂ, ವ್ಯಾಮ್, ಪಿ.ಎಸ್.ಬಿ, ಟ್ರೈಕೋಡರ್ಮಾ ಮತ್ತು ಸುಡೊಮಾನಾಸ್‌ಗಳ ಬಳಕೆ ಬಗ್ಗೆ ಜಾಗೃತಿ ಮೂಡಿಸಲಾಗಿದೆ.

**ಕೃಷಿ ಅಭಿವೃದ್ಧಿ ಚಟುವಟಿಕೆಗಳ ಪ್ರಗತಿಯ ಪಕ್ಷಿ ನೋಟ**

**ಕ್ಷೇತ್ರ ಪ್ರಾತ್ಯಕ್ಷಿಕೆಗಳು:**

ಒಟ್ಟಾರೆ ಸರಾಸರಿ ಸಾಧಿಸಿರುವ ಪ್ರಗತಿಯು ಶೇ.94 ರಷ್ಟು ಆಗಿದ್ದು, ನೀರು ನಿರ್ವಹಣಾ ಪ್ರಾತ್ಯಕ್ಷಿಕೆ (ಶೇ.94), ಆಹಾರ ಬೆಳೆ ಪ್ರಾತ್ಯಕ್ಷಿಕೆಗಳು (ಶೇ.92), ತೋಟಗಾರಿಕೆ ಬೆಳೆ ಪ್ರಾತ್ಯಕ್ಷಿಕೆಗಳು (ಶೇ.101), ಮೇವು ಬೆಳೆ ಪ್ರಾತ್ಯಕ್ಷಿಕೆಗಳು (ಶೇ.93), ಸಮಗ್ರ ಬೆಳೆ ಪದ್ದತಿ ಪ್ರಾತ್ಯಕ್ಷಿಕೆಗಳು (ಶೇ.73) ಮತ್ತು ರೈತರ ಕ್ಷೇತ್ರ ಪಾಠಶಾಲೆಯಡಿ ಶೇ.74 ರಷ್ಟು ಪ್ರಗತಿಯನ್ನು ಸಾಧಿಸಲಾಗಿರುತ್ತದೆ. ಕೃಷಿ ವಿಶ್ವವಿದ್ಯಾನಿಲಯಗಳು ವಿಶೇಷವಾಗಿ ಸಮಗ್ರ ಬೆಳೆ ಪದ್ದತಿ ಪ್ರಾತ್ಯಕ್ಷಿಕೆಗಳು ಮತ್ತು ರೈತ ಕ್ಷೇತ್ರ ಪಾಠಶಾಲೆಗಳು ಸೇರಿದಂತೆ ಎಲ್ಲಾ ಪ್ರಾತ್ಯಕ್ಷಿಕೆಗಳ ಕಾರ್ಯಕ್ರಮಗಳ ವೇಗವನ್ನು ಹೆಚ್ಚಿಸಿ ಶೀಘ್ರ ಅನುಷ್ಠಾನ ಮುಕ್ತಾಯಗೊಳ್ಳುವಂತೆ ಸೂಚನೆ ನೀಡಲಾಗಿರುತ್ತದೆ.

**<u>ತರಬೇತಿ ಮತ್ತು ಸಾಮರ್ಥ್ಯ ಬಲವರ್ಧನೆ ಚಟುವಟಿಕೆಗಳು:</u>**

ಈ ಕಾರ್ಯಕ್ರಮದಡಿ ಸಾಧಿಸಿರುವ ಒಟ್ಟಾರೆ ಸರಾಸರಿ ಸಾಧನೆಯು ಶೇ.53 ರಷ್ಟಾಗಿರುತ್ತದೆ. ಅಂದರೆ, ಯೋಜನಾ ಸಿಬ್ಬಂದಿಗೆ ತಾಂತ್ರಿಕ ತರಬೇತಿ (ಶೇ.61), ಜಿಲ್ಲಾ ಮಟ್ಟದ ಕಾರ್ಯಾಗಾರ (ಶೇ.25), ಸಮೂಹ ಮಟ್ಟದ ಕಾರ್ಯಾಗಾರ (ಶೇ.51), ಸಮೂಹ ಮಟ್ಟದ ಅಂತರ ಕ್ರಿಯಾ ಸಮ್ಮೇಳನ (ಶೇ.34) ಮತ್ತು ರೈತರ ಅಧ್ಯಯನ ಪ್ರವಾಸದಡಿ ಶೇ.80 ರಷ್ಟು ಪ್ರಗತಿ ಆಗಿರುತ್ತದೆ. ಆದರೆ, ವಾರ್ಷಿಕ ಕಾರ್ಯಾಗಾರ ಮತ್ತು ಜಂಟಿ ಕಾರ್ಯಾಗಾರಗಳ ಪ್ರಗತಿಯು ಶೂನ್ಯವಾಗಿರುತ್ತದೆ.

**<u>ಮಣ್ಣು ವಿಶ್ಲೇಷಣೆ:</u>**

ಈ ಕಾರ್ಯಕ್ರಮದಡಿ ಸಾಧಿಸಿರುವ ಪ್ರಗತಿಯು ಶೇ.69 ರಷ್ಟಾಗಿರುತ್ತದೆ.

ಎರಡೂ ಕೃಷಿ ವಿಶ್ವವಿದ್ಯಾನಿಲಯದವರು ಶೀಘ್ರ ಪ್ರಗತಿ ಸಾಧಿಸಲು ಅನುವಾಗುವಂತೆ ಸೂಕ್ಷ್ಮ ಯೋಜನೆಯನ್ನು ರೂಪಿಸಿ, ತರಬೇತಿ ಮತ್ತು ಸಾಮರ್ಥ್ಯ ಬಲವರ್ಧನೆ ಚಟುವಟಿಕೆಗಳು/ಕಾರ್ಯಾಗಾರಗಳು ಮತ್ತು ಮಣ್ಣು ವಿಶ್ಲೇಷಣೆಗಳಡಿ ನಿಗದಿಪಡಿಸಿರುವ ಗುರಿಗಳನ್ನು ಯೋಜಿತ ಸಮಯದೊಳಗೆ ಸಾಧಿಸುವಂತೆ ಸೂಚಿಸಲಾಗಿರುತ್ತದೆ. ಈ ಮೇಲಿನಂತೆ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಧಾರವಾಡದವರು ಪರಿಣಾಮಕಾರಿ ನೀರು ನಿರ್ವಹಣೆ ಪದ್ಧತಿ, ಸಮರ್ಥ ನೀರು ಬಳಕೆ, ಸಮಗ್ರ ಪೋಷಕಾಂಶ ನಿರ್ವಹಣೆ, ಸಮಗ್ರ ಪೀಡೆ ನಿರ್ವಹಣೆ ಸೇರಿದಂತೆ ವಿವಿಧ ಕೃಷಿ ಅಭಿವೃದ್ಧಿ ಚಟುವಟಿಕೆಗಳನ್ನು ಕೆರೆ ಅಚ್ಚುಕಟ್ಟು ಪ್ರದೇಶದಲ್ಲಿ ಅನುಷ್ಠಾನಗೊಳಿಸಲು ಕೆರೆ ನಿರ್ವಹಣಾ ಸಂಸ್ಥೆಗಳ ಸದಸ್ಯರುಗಳಿಗೆ ತಿಳುವಳಿಕೆ ಮೂಡಿಸುವುದು ಮತ್ತು ಸಾಮರ್ಥ್ಯ ಬಲವರ್ಧನೆ ವೃದ್ಧಿಸಲು ಕೈಗೊಂಡು ಸಾಧಿಸಿರುವ ಪ್ರಗತಿಯನ್ನು ಈ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

ಎರಡನೇ ಹಂತ ಯೋಜನೆಯಲ್ಲಿ ಅನುಷ್ಠಾನಗೊಳಿಸಲಾದ ಕೃಷಿ ಅಭಿವೃದ್ಧಿ ಚಟುವಟಿಕೆಗಳ ಪ್ರಗತಿ ಬಗ್ಗೆ ಈವರೆಗೆ ಕೈಗೊಂಡಿರುವ ಬಾಹ್ಯ ಮತ್ತು ಆಂತರಿಕ ಮೌಲ್ಯ ಮಾಪನಗಳ ವರದಿಯಲ್ಲಿ ಉತ್ತಮ ಫಲಿತಾಂಶಗಳು ಹೊರ ಹೊಮ್ಮಿರುವುದನ್ನು ದಾಖಲಿಸಲಾಗಿದೆ. ಇದರಿಂದ ಯೋಜನೆಯ ಉದ್ದೇಶಗಳು ಈಡೇರಿರುವುದನ್ನು ಗಮನಿಸಬಹುದಾಗಿದೆ.

**ಕೃಷಿ ಚಟುವಟಿಕೆಗಳು:**

ಮುಂದುವರಿದ ಯೋಜನೆ ಮತ್ತು ಹೆಚ್ಚುವರಿ ಹಣಕಾಸಿನ ಯೋಜನೆಯಡಿಯಲ್ಲಿಯೂ ಸಹ ಕೃಷಿ ವಿಶ್ವ ವಿದ್ಯಾನಿಲಯ ಬೆಂಗಳೂರು ಮತ್ತು ಧಾರವಾಡ ಇವರುಗಳ ಸಲಹಾ ಸೇವೆಯನ್ನು ಪಡೆಯಲಾಗಿರುತ್ತದೆ. 2010–11 ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾದ ಕೃಷಿ ಚಟುವಟಿಕೆಗಳ ವಿವರಗಳು ಕೆಳಗಿನಂತೆ ಇರುತ್ತವೆ.

| ಕ್ರ ಸಂ | ಚಟುವಟಿಕೆಗಳು | ಘಟಕ | ಕೃ.ವಿ.ವಿ ಬೆಂಗಳೂರು | | | ಕೃ.ವಿ.ವಿ ಧಾರವಾಡ | | | ಒಟ್ಟು | | |
|---|---|---|---|---|---|---|---|---|---|---|---|
| | | | ಗುರಿ | ಸಾಧನೆ | ಶೇಕಡ | ಗುರಿ | ಸಾಧನೆ | ಶೇಕಡ | ಗುರಿ | ಸಾಧನೆ | ಶೇಕಡ |
| **ಅ** | ಕ್ಷೇತ್ರ ಪ್ರಾತ್ಯಕ್ಷಿಕೆಗಳು | | | | | | | | | | |
| 1 | ನೀರು ನಿರ್ವಹಣೆ | ಸಂಖ್ಯೆ | 112 | 102 | 91 | 46 | 47 | 102 | 158 | 149 | 94 |
| 2 | ಆಹಾರ ಬೆಳೆ | ಸಂಖ್ಯೆ | 112 | 100 | 89 | 42 | 41 | 98 | 154 | 141 | 92 |
| 3 | ತೋಟಗಾರಿಕೆ | ಸಂಖ್ಯೆ | 89 | 83 | 93 | 29 | 36 | 124 | 118 | 119 | 101 |
| 4 | ಐ.ಎಫ್.ಎಸ್.ಡಿ | ಸಂಖ್ಯೆ | 9 | 9 | 100 | 6 | 2 | 33 | 15 | 11 | 73 |
| 5 | ಮೇವು ಬೆಳೆ | ಸಂಖ್ಯೆ | 56 | 56 | 100 | 29 | 23 | 79 | 85 | 79 | 93 |
| 6 | ರೈತರ ಕ್ಷೇತ್ರ ಪಾಠಶಾಲೆ | ಸಂಖ್ಯೆ | 1037 | 745 | 72 | 254 | 209 | 82 | 1291 | 954 | 74 |
| **ಆ** | ತರಬೇತಿ ಮತ್ತು ಸಾಮರ್ಥ್ಯ ಬಲವರ್ಧನೆ | | | | | | | | | | |
| 1 | ಸಿಬ್ಬಂದಿ ತರಬೇತಿ | ಸಂಖ್ಯೆ | 205 | 157 | 77 | 3 | 2 | 67 | 208 | 159 | 76 |
| 2 | ತರಬೇತುದಾರರ ತರಬೇತಿ | ಸಂಖ್ಯೆ | 147 | 128 | 87 | 3 | 3 | 100 | 150 | 131 | 87 |
| 3 | ರೈತರ ತರಬೇತಿ | ಬ್ಯಾಚ್ | 28 | 20 | 71 | 16 | 7 | 44 | 44 | 27 | 61 |
| 4 | ಜಿಲ್ಲಾ ಮಟ್ಟದ ಕಾರ್ಯಗಾರ | ಸಂಖ್ಯೆ | 39 | 9 | 23 | 16 | 5 | 31 | 55 | 14 | 25 |

| ಕ್ರ ಸಂ | ಚಟುವಟಿಕೆಗಳು | ಘಟಕ | ಕೃ.ವಿ.ವಿ ಬೆಂಗಳೂರು | | | ಕೃ.ವಿ.ವಿ ಧಾರವಾಡ | | | ಒಟ್ಟು | | |
|---|---|---|---|---|---|---|---|---|---|---|---|
| | | | ಗುರಿ | ಸಾಧನೆ | ಶೇಕಡ | ಗುರಿ | ಸಾಧನೆ | ಶೇಕಡ | ಗುರಿ | ಸಾಧನೆ | ಶೇಕಡ |
| 5 | ಸಮೂಹ ಮಟ್ಟದ ಕಾರ್ಯಗಾರ | ಸಂಖ್ಯೆ | 168 | 81 | 48 | 47 | 29 | 62 | 215 | 110 | 51 |
| 6 | ಸಮುದಾಯ ಮಟ್ಟದ ಅಂತರ್ ಅಚ್ಚುಕಟ್ಟು ಅಧಿವೇಶನಗಳು | ಸಂಖ್ಯೆ | 56 | 21 | 38 | 12 | 2 | 17 | 68 | 23 | 34 |
| 7 | ರೈತರ ಶೈಕ್ಷಣಿಕ ಪ್ರವಾಸ | ಸಂಖ್ಯೆ | 27 | 18 | 67 | 8 | 10 | 125 | 35 | 28 | 80 |
| 8 | ವಾರ್ಷಿಕ ಕಾರ್ಯಗಾರ | ಸಂಖ್ಯೆ | 3 | 0 | 0 | 0 | 0 | 0 | 3 | 0 | 0 |
| 9 | ಜಂಟಿ ಕಾರ್ಯಗಾರ | ಸಂಖ್ಯೆ | 6 | 0 | 0 | 0 | 0 | 0 | 6 | 0 | 0 |
| ಇ | ಮಣ್ಣು ಪರೀಕ್ಷೆ | ಗ್ರಾಮ | 1336 | 801 | 60 | 425 | 406 | 96 | 1761 | 1207 | 69 |

**ಮೀನುಗಾರಿಕೆ ಚಟುವಟಿಕೆಗಳು:**

2010–11ನೇ ಸಾಲಿನಲ್ಲಿ ಮೊದಲ ಹಂತದ ಯೋಜನೆಯಡಿ ಮೀನುಗಾರಿಕೆಗೆ ಸೂಕ್ತವಾಗಿರುವ 172 ಕೆರೆಗಳಲ್ಲಿ 50.04 ಲಕ್ಷದಷ್ಟು ದೊಡ್ಡ ಗಾತ್ರದ ಮೀನು ಮರಿಗಳನ್ನು ಟಿ.ಯು.ಜಿ ಮುಖಾಂತರ ಬಿಡಿಸಲಾಗಿದೆ. 600 ಕೆರೆಗಳಲ್ಲಿ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಳ್ಳುವ ಗುರಿ ಹೊಂದಿದ್ದು ಒಟ್ಟು 610 ಕೆರೆಗಳಲ್ಲಿ ಮೀನುಗಾರಿಕೆ ಚಟುವಟಿಕೆಯನ್ನು ಕೈಗೊಳ್ಳಲಾಗಿದೆ. ಇದರಲ್ಲಿ 108 ಲಕ್ಷ ಮೀನಿನ ಮರಿಗಳನ್ನು ಬಿಡಲಾಗಿದೆ. ಅದರಿಂದ ಭಾಗಶ: 630 ಮೆಟ್ರಿಕ್ ಟನ್‌ಗಳಷ್ಟು ಮೀನು ಉತ್ಪಾದನೆಯಾಗಿರುತ್ತದೆ. ಇದರಿಂದ ಬಂದ ಆದಾಯ ರೂ.152.00 ಲಕ್ಷಗಳಾಗಿದೆ. ಬಂದ ಆದಾಯವನ್ನು ಶೇಕಡ 30:70 ರ ಅನುಪಾತದಲ್ಲಿ ಕೆರೆ ನಿರ್ವಹಣಾ ಸಂಘಗಳು ಹಾಗೂ ಭೂರಹಿತ ಫಲಾನುಭವಿಗಳು/ಮೀನುಗಾರರಿಗೆ ಹಂಚುವ ವ್ಯವಸ್ಥೆ ರೂಪಿಸಿಕೊಂಡಿದ್ದಾರೆ. ಒಟ್ಟು 4800 ಭೂ ರಹಿತ ಫಲಾನುಭವಿಗಳು ಈ ಚಟುವಟಿಕೆಯಡಿ ಪ್ರಯೋಜನ ಪಡೆದಿರುತ್ತಾರೆ.

ಎರಡನೇ ಹಂತದ ಯೋಜನೆಯಡಿ 2010–11ನೇ ಸಾಲಿನಲ್ಲಿ ಮೀನುಗಾರಿಕೆಗೆ ಸೂಕ್ತವಿರುವ 395 ಕೆರೆಗಳಲ್ಲಿ 55.98 ಲಕ್ಷಗಳಷ್ಟು ದೊಡ್ಡ ಗಾತ್ರದ ಮೀನಿನ ಮರಿಗಳನ್ನು ಬಿಡುವ ಮೂಲಕ ಮೀನುಗಾರಿಕೆಯನ್ನು ಪ್ರೋತ್ಸಾಹಿಸಲಾಗಿದೆ. ಅದರಿಂದ ಭಾಗಶ: 103 ಮೆಟ್ರಿಕ್ ಟನ್‌ನಷ್ಟು (ಮೀನು ಹಿಡುವಳಿ ಪ್ರಕ್ರಿಯೆ ಪ್ರಗತಿಯಲ್ಲಿದೆ) ಉತ್ಪಾದನೆಯಾಗಿದೆ. ಅದರಿಂದ ಬಂದ ಆದಾಯ ರೂ.40.66 ಲಕ್ಷಗಳು (ಭಾಗಶ: ಆದಾಯ).

**ಕೃಷಿ ಮಾರುಕಟ್ಟೆ :**

ಕೃಷಿ ಉತ್ಪಾದನೆಗೆ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಬೆಲೆ ಪಡೆಯುವುದು ಉತ್ತೇಜಕವಾಗಿರುತ್ತದೆ. ಸ್ಪರ್ಧಾತ್ಮಕ ಬೆಲೆಯಿಂದ ಕೃಷಿಕರ ಆರ್ಥಿಕ ಸ್ಥಿತಿಗತಿ ಉತ್ತಮಗೊಳ್ಳುತ್ತದೆ. ಈ ಹಿನ್ನಲೆಯಲ್ಲಿ ಈ ಯೋಜನೆಯಲ್ಲಿ ರೈತರಿಗೆ ನೆರವಾಗಲು ಅಂತಹ ಆಯಾಮಗಳ ಸ್ಪಂದನಕ್ಕೆ ಅವಕಾಶ ಮಾಡಲು ಪ್ರಯತ್ನಿಸಲಾಗಿದೆ. ಈ ದಿಸೆಯಲ್ಲಿ ಕೊಳ್ಳುವವರ ಮತ್ತು ಮಾರುವವರ ಸಂಪರ್ಕ ಜಾಲದ ಪರಿಕಲ್ಪನೆಗೆ ತೊಡಗಲಾಗಿದೆ. ಇದಕ್ಕಾಗಿ ಕೆರೆ ಉಪಯೋಗ ಗುಂಪಿನ ಸದಸ್ಯರಿಗೆ ಸೂಕ್ತ ರೀತಿ ಕೃಷಿ ಮಾರಾಟದಲ್ಲಿ ವರ್ಗೀಕರಣ/ಪ್ರಮಾಣೀಕರಣ ದಾಸ್ತಾನು ಹಾಗೂ ಪೇಟೆ ಸಮಾಚಾರದ ಮಾಹಿತಿಗಳ ತರಬೇತಿ ನೀಡಲಾಗಿದೆ. ಜೊತೆಗೆ ವಸ್ತು ಪ್ರದರ್ಶನಗಳ ಆಯೋಜನೆ ರೈತರ ಸಮಸ್ಯೆಗಳಿಗೆ ಉಚಿತ ಮಾಹಿತಿಗಾಗಿ ಕಿಸಾನ್ ಕರೆ (ಫೋನ್ ನಂ.1551)ರ ನೆರವು ಬಗ್ಗೆ ತಿಳುವಳಿಕೆ ನೀಡಲಾಗಿದೆ. ಜೊತೆಗೆ ಜಲ ಸಂವರ್ಧನೆ ಯೋಜನಾ ಸಂಘದ ವೆಬ್ ಸೈಟ್‌ನಲ್ಲಿ ಜನವರಿ 2011 ರಿಂದ ವಾರದ ಬೆಲೆ ಮುನ್ಸೂಚನೆ (5–10 ವಾರಗಳ ಮುಂಚಿತವಾಗಿ) ಕನಷ್ಠ ಬೆಂಬಲ ಬೆಲೆ ಹಾಗೂ ಸರ್ಕಾರದ ಮಾರಾಟ ಮಧ್ಯ ಪ್ರವೇಶದಲ್ಲಿ ಖರೀದಿಸುವ 13 ಉತ್ಪನ್ನಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಅಳವಡಿಸಲಾಗಿದೆ. ಕೃಷಿ ಮಾರಾಟದ ಹೆಚ್ಚಿನ ವಿವರಗಳನ್ನೊಳಗೊಂಡ ಕೃಷಿ ಮಾರಾಟ ಮಾಹಿತಿ ಕೈಪಿಡಿಯನ್ನು ಜಲ ಸಂವರ್ಧನೆ ಯೋಜನಾ ಸಂಘದ ವೆಬ್‌ಸೈಟಿನಲ್ಲಿ ಅಳವಡಿಸಲಾಗಿದೆ.

**ಮಾಧ್ಯಮ ಹಾಗೂ ಸಂವಹನ ಚಟುವಟಿಕೆಗಳು:**

ಸಮಗ್ರ ಕೆರೆ ಅಭಿವೃದ್ಧಿ ಯೋಜನೆಯ ಚಟುವಟಿಕೆಗಳ ಹಣಕಾಸಿನ ಮಾಹಿತಿಯನ್ನು ಕೆರೆ ಬಳಕೆದಾರರ ಸಂಘಗಳ ಮಟ್ಟದಲ್ಲಿ ಗೋಡೆಬರಹಗಳ ಮೂಲಕ ಪ್ರದರ್ಶಿಸಲಾಗಿದೆ. ಜಿಲ್ಲಾ ಯೋಜನಾ ಘಟಕದ ವ್ಯಾಪ್ತಿಯಲ್ಲಿ ಬರುವ ಸಿವಿಲ್ ಕಾಮಗಾರಿ ನಡೆಯುವ ಸ್ಥಳದ ಪಕ್ಕದಲ್ಲಿ ಕೆರೆ ಬಳಕೆದಾರರ ಸಂಘದ ಹೆಸರು, ಗ್ರಾಮದ ಹೆಸರು ಹಾಗೂ ಸಮಗ್ರ ಕೆರೆ ಅಭಿವೃದ್ಧಿ ಯೋಜನೆಯ ಮೊತ್ತ ಮತ್ತು ಸಿವಿಲ್ ಕಾಮಗಾರಿಗಳ ಮೊತ್ತವನ್ನು ಒಳಗೊಂಡಂತೆ ಆರ್.ಸಿ.ಸಿ ನಾಮಫಲಕಗಳ ಹಾಕಲಾಗಿದೆ. ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯ ಕೆರೆ ನಿರ್ವಹಣೆ ಹಸ್ತಾಂತರ ಪತ್ರಗಳನ್ನು ಹೊರತರಲಾಗಿದೆ. ಯೋಜನೆ ವಿವರವನ್ನು ಕೂಡಾ ಪ್ರದರ್ಶಿಸಲಾಗುತ್ತದೆ.

ಯೋಜನೆಯ ವಿವಿಧ ಚಟುವಟಿಕೆಗಳ ಯಶಸ್ವಿ ಕಥೆಗಳನ್ನು ಹಾಗೂ ಯಶೋಗಾಥೆಗಳನ್ನು "ಜಲ ಸಂವರ್ಧನೆ" ವಾತಾಪತ್ರಗಳ (ತ್ರೈಮಾಸಿಕ) ಮೂಲಕ ಹೊರತರಲಾಗುತ್ತಿದೆ. ಅಷ್ಟೇ ಅಲ್ಲದೆ ದೂರದರ್ಶನ, ಖಾಸಗಿ ಚಾನೆಲ್, ರೇಡಿಯೋ, ಮಾಸ ಪತ್ರಿಕೆ ಮತ್ತು ದಿನ ಪತ್ರಿಕೆಗಳ ಮೂಲಕ ಪ್ರಚಾರ ನೀಡಲಾಗುತ್ತಿದೆ.

**ಸಮೂಹ ಮಾರ್ಗದರ್ಶನ ತಂಡಗಳಿಗೆ ಮಾರ್ಗದರ್ಶನ ನೀಡಲು ಸ್ವಯಂ ಸೇವಾ ಸಂಸ್ಥೆಗಳನ್ನು ನೇಮಿಸುವ ಬಗ್ಗೆ:**

ರಾಜ್ಯದ 9 ಜಿಲ್ಲೆಗಳ 34 ತಾಲ್ಲೂಕುಗಳಲ್ಲಿ ಹೆಚ್ಚುವರಿ ಹಣಕಾಸಿನ ಯೋಜನೆಯನ್ನು ಜೂನ್–2009 ರಿಂದ ಪ್ರಾರಂಭಿಸಲಾಗಿರುತ್ತದೆ. ಸಮುದಾಯಕ್ಕೆ ಸಾಮರ್ಥ್ಯ ಹೆಚ್ಚಿಸಲು ತರಬೇತಿ ನೀಡಲು 46 ಸಮೂಹ ಮಾರ್ಗದರ್ಶನ ತಂಡಗಳು (ಸ.ಮಾ.ತಂ) ಮತ್ತು ಒಂದು ಜಿಲ್ಲಾ ಮಾರ್ಗದರ್ಶನ ತಂಡ (ಜಿ.ಮಾ.ತಂ) ಗಳನ್ನು ನೇಮಿಸಲಾಗಿರುತ್ತದೆ.

8 ಜಿಲ್ಲೆಗಳ 24 ತಾಲ್ಲೂಕುಗಳಲ್ಲಿ ಪ್ರಸ್ತುತ ಯೋಜನೆಯ ಮುಂದುವರೆದ ಯೋಜನೆಯನ್ನು ಸೆಪ್ಟಂಬರ್–2009 ರಿಂದ ಪ್ರಾರಂಭಿಸಲಾಗಿರುತ್ತದೆ. ಸಮುದಾಯಕ್ಕೆ ಸಾಮರ್ಥ್ಯ ಹೆಚ್ಚಿಸಲು ತರಬೇತಿ ನೀಡಲು 33 ಸಮೂಹ ಮಾರ್ಗದರ್ಶನ ತಂಡಗಳು (ಸ.ಮಾ.ತಂ) ಮತ್ತು 4 ಜಿಲ್ಲಾ ಮಾರ್ಗದರ್ಶನ ತಂಡ (ಜಿ.ಮಾ.ತಂ) ಗಳನ್ನು ನೇಮಿಸಲಾಗಿರುತ್ತದೆ.

ದಿನಾಂಕ: 31.03.2011 ರ ಅಂತ್ಯಕ್ಕೆ ಹೆಚ್ಚುವರಿ ಹಣಕಾಸಿನ ಯೋಜನೆಯನ್ನು ಮತ್ತು ಪ್ರಸ್ತುತ ಯೋಜನೆಯ ಮುಂದುವರೆದ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಸಮೂಹ ಮಾರ್ಗದರ್ಶನ ತಂಡಗಳ ಮತ್ತು ಜಿಲ್ಲಾ ಮಾರ್ಗದರ್ಶನ ತಂಡ ವಿವರ ಈ ಕೆಳಗಿನಂತೆ ಇರುತ್ತದೆ.

| **ಕ್ರ.ಸಂ** | **ಯೋಜನೆ** | **ಸಮಾತಂ** | **ಜಿಮಾತಂ** | **ಒಟ್ಟು** |
|---|---|---|---|---|
| 1 | ಹೆಚ್ಚುವರಿ ಹಣಕಾಸಿನ ಯೋಜನೆ | 37 | 10 | 47 |
| 2 | ಪ್ರಸ್ತುತ ಯೋಜನೆಯ ಮುಂದುವರೆದ ಯೋಜನೆ | 27 | 10 | 37 |
| **ಒಟ್ಟು** | | **64** | **20** | **84** |

**ಯೋಜನೆಯ ಅಂದಾಜು ಹಾಗೂ ಆರ್ಥಿಕ ಗುರಿ ಸಾಧನೆ :**

ಯೋಜನೆಯ ಒಟ್ಟು ವೆಚ್ಚ ರೂ. 670.59 ಕೋಟಿ ನಿಗದಿಯಾಗಿದ್ದು, ಅದರಲ್ಲಿ ಸುನಾಮಿ ಪರಿಹಾರ ಕಡಿತದ ನಂತರ ರೂ. 508.63 ಕೋಟಿಗಳು ಆಗಿರುತ್ತದೆ. ಈ ಪೈಕಿ ವಿಶ್ವ ಬ್ಯಾಂಕ್ ರೂ. 401.86 ಕೋಟಿ (79%) ರಾಜ್ಯ ಸರ್ಕಾರ ರೂ. 86.41 ಕೋಟಿ (17%) ಹಾಗೂ ಸಮುದಾಯದ ಪಾಲು ರೂ. 20.35 (4%) ಕೋಟಿಯಂತೆ ಭರಿಸಲಾಗುವುದು.

ಮಾರ್ಚ್ 2011 ರ ಅಂತ್ಯದ ವರೆಗೆ ರೂ. 314.00 ಕೋಟಿಗಳನ್ನು ಅನುಷ್ಠಾನಕ್ಕಾಗಿ ವ್ಯಯಿಸಲಾಗಿದೆ. ಮೇಲೆ ವಿವರಿಸಿದಂತೆ ಯೋಜನೆಯನ್ನು ರೂ. 330.69 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಂಡಿದ್ದು, ಉಳಿದ ರೂ. 177.94 ಕೋಟಿ ವೆಚ್ಚದಲ್ಲಿ 694 ಹೆಚ್ಚುವರಿ ಕೆರೆಗಳನ್ನು ಪುನಶ್ಚೇತಗೊಳಿಸಲಾಗುವುದು.

**ಎರಡನೇ ಹಂತದ ಹೆಚ್ಚುವರಿ ಹಣಕಾಸಿನ ಯೋಜನೆ (ಮುಂದುವರೆದ ಯೋಜನೆ).**

ವಿಶ್ವ ಬ್ಯಾಂಕಿನ ಹೆಚ್ಚುವರಿ ಹಣಕಾಸಿನ ನೆರವಿನೊಂದಿಗೆ ಎರಡನೇ ಹಂತದಲ್ಲಿ ಯೋಜನೆಯನ್ನು ರಾಜ್ಯದ 8 ಜಿಲ್ಲೆಗಳ 37 ತಾಲ್ಲೂಕುಗಳ 1224 ಕೆರೆಗಳನ್ನು ಕೈಗೆತ್ತಿಕೊಳ್ಳಾಗಿದೆ. ಒಟ್ಟು 53 ಸಾವಿರ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ. ವಿಶ್ವಬ್ಯಾಂಕಿನ ಜೊತೆ ನಡೆಸಿದ ಒಡಂಬಡಿಕೆಯೊಂದಿಗೆ ಯೋಜನೆಯ ಅಂದಾಜು ವೆಚ್ಚವನ್ನು ರೂ.306.98 ಕೋಟಿಗಳಿಗೆ ನಿಗದಿಪಡಿಸಲಾಗಿದೆ.

ಎರಡನೇ ಹಂತದ ರೂ 306.98 ಕೋಟಿಗಳಲ್ಲಿ ಮಾರ್ಚ್ 2011 ರ ಅಂತ್ಯದವರೆಗೆ ರೂ. 67.74 ಕೋಟಿ ವೆಚ್ಚಮಾಡಲಾಗಿದೆ. ಪೂರ್ಣ ಪ್ರಮಾಣದ ಕಾಮಗಾರಿಗಳ ಅನುಷ್ಠಾನ ಆರಂಭವಾಗಿದ್ದು ಯೋಜನೆಯ ನೈಜ ವೆಚ್ಚ ಮುಂದಿನ ದಿನಗಳಲ್ಲಿ ಹೆಚ್ಚಾಗಲಿದೆ.

**ಮೊದಲ ಹಂತದ ವಿಸ್ತರಣಾ ಯೋಜನೆ (ಮೊದಲ ಹಂತದಲ್ಲಿ ಆಯ್ಕೆಯಾಗದ ತಾಲ್ಲೂಕುಗಳು):**

ಮೊದಲ ಹಂತದ ವಿಸ್ತರಣಾ ಯೋಜನಾ ಜಿಲ್ಲೆಗಳಲ್ಲಿ ಆಯ್ಕೆಮಾಡದ ತಾಲ್ಲೂಕುಗಳಲ್ಲಿನ ಹೆಚ್ಚುವರಿ 730 ಕೆರೆಗಳನ್ನು ಮೊದಲನೇ ಹಂತದಲ್ಲಿ ಉಳಿತಾಯವಾಗಿದ್ದ ರೂ. 177.94 ಕೋಟಿಗಳ ವೆಚ್ಚದಲ್ಲಿ ಪುನಃಶ್ಚೇತನಗೊಳಿಸಲು ಯೋಜನೆ ರೂಪಿಸಲಾಗಿದೆ. ಪರಿಷ್ಕೃತ 30 ತಿಂಗಳ ಯೋಜನಾ ಹಂತವು ಆಗಸ್ಟ್ 2009 ರಿಂದ ಆರಂಭಗೊಮಡಿದ್ದು, ಎನ್.ಜಿ.ಓ ಗಳ ವತಿಯಿಂದ 33 ಸಮೂಹ ಮಾರ್ಗದರ್ಶನ ತಂಡಗಳನ್ನು ಹಾಗೂ ಜಿಲ್ಲಾ ಯೋಜನಾ ಘಟಕದ ವತಿಯಿಂದ 4 ಜಿಲ್ಲಾ ಮಾರ್ಗದರ್ಶನ ತಂಡಗಳನ್ನು ನಿಯೋಜಿಸಲಾಗಿದೆ. ಈಗಾಗಲೆ ಯೋಜನೆಯ ಅನುಷ್ಠಾನ ಹಂತದ ಚಟುವಟಿಕೆಗಳನ್ನು ಈ ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯನ್ನು 31.01.2012 ರೊಳಗೆ ಪೂರ್ಣಗೊಳಿಸಲಾಗುವುದು. ವಿಶ್ವ ಬ್ಯಾಂಕ್‌ನಿಂದ ಈ ಯೋಜನೆಗೆ ಅನುಮೋದನೆ ಪಡೆದಿದ್ದು, ಇದಕ್ಕೆ ಹೆಚ್ಚುವರಿಯಾಗಿ ಯಾವುದೇ ಹಣಕಾಸಿನ ಹೊರೆ ಇರುವುದಿಲ್ಲ.

ಈ ಯೋಜನೆಯಡಿಯಲ್ಲಿ ಮಾರ್ಚ್ 2011 ರ ಅಂತ್ಯದವರೆಗೆ ರೂ. 36.33 ಕೋಟಿಗಳು ವೆಚ್ಚವಾಗಿರುತ್ತದೆ.

ಈಗ ಒಟ್ಟು 37 ಸಮೂಹ ಮಾರ್ಗದರ್ಶನ ತಂಡಗಳು ಹಾಗೂ 12 ಜಿಲ್ಲಾ ಮಾರ್ಗದರ್ಶನ ತಂಡಗಳು ಮುಂದುವರೆದ ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿವೆ. ಪ್ರತಿ ಕೆರೆ ನಿರ್ವಹಣಾ ಸಂಘಗಳು ಯೋಜನೆಯ ಅನುಷ್ಠಾನವನ್ನು ಪ್ರತಿ ಕೆರೆಗೆ 3 ತಿಂಗಳ ಯೋಜನಾ ಪೂರ್ವ ಹಂತ, 4 ತಿಂಗಳ ಯೋಜನಾ ಹಂತ, 18 ತಿಂಗಳ ಅನುಷ್ಠಾನ ಹಂತ ಹಾಗೂ 5 ತಿಂಗಳು ಅನುಷ್ಠಾನೋತ್ತರ ಹಂತವೆಂದು ವಿಂಗಡಿಸಿ 30 ತಿಂಗಳ ಅವಧಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಈಗ ಹಾಲಿ ಅನುಷ್ಠಾನ ಹಂತದ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಎರಡನೇ ಹಂತದ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯ ಪ್ರಗತಿಯ ವಿವರವು ಈ ಕೆಳಗಿನಂತಿವೆ:–**

ಮುಂದುವರೆದ ಯೋಜನೆಯ ಹೊಸ 8 ಜಿಲ್ಲೆಗಳಲ್ಲಿ 9 ಜಿಲ್ಲಾ ಯೋಜನಾ ಘಟಕಗಳನ್ನು ಪ್ರಾರಂಭಿಸಲಾಗಿದ್ದು, ಸಣ್ಣ ನೀರಾವರಿ ಹಾಗೂ ಪಂಚಾಯತ್ ರಾಜ್ ಇಲಾಖೆ ಜೊತೆಗೆ ಸಮಾಲೋಚಿಸಿ ಯೋಜನೆಯ ಎಲ್ಲಾ 37 ತಾಲ್ಲೂಕುಗಳ 1108 ಕೆರೆಗಳ ಯೋಜನಾ ಪೂರ್ವಹಂತ ಹಾಗೂ ಯೋಜನಾ ಹಂತದ ಚಟುವಟಿಕೆಗಳು ಪೂರ್ಣಗೊಂಡಿದ್ದು, ಕೆರೆ ಕಾಮಗಾರಿಗಳನ್ನು ಹಮ್ಮಿಕೊಳ್ಳುವ ಹಂತದಲ್ಲಿದೆ.

**ತಾಂತ್ರಿಕ ಚಟುವಟಿಕೆಗಳು:**

1224 ಕೆರೆಗಳನ್ನು ಅಭಿವೃದ್ಧಿಪಡಿಸಲು ಗುರಿಹೊಂದಿದ್ದು ಇದುವರೆಗೆ 1157 ಕೆರೆಗಳಲ್ಲಿ ಟೋಪೋ ಸರ್ವೆ ಕಾರ್ಯ ಮುಗಿದಿದ್ದು 1069 ಸಂಖ್ಯೆ ಕೆರೆಗಳಿಗೆ ITDP ತಯಾರಿಸಿ 1053 ಕೆರೆ ಕಾಮಗಾರಿಗಳು ಅನುಷ್ಠಾನ ಹಂತದಲ್ಲಿ ಪ್ರಗತಿಯಲ್ಲಿವೆ. ಒಟ್ಟಾರೆ 02.07.2011 ರವರೆಗೆ ರೂ.73.13 ಕೋಟಿಗಳ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

**<u>ಆದಾಯೋತ್ಪನ್ನ ಚಟುವಟಿಕೆಗಳು:</u>**

**ಹೆಚ್ಚುವರಿ ಹಣಕಾಸಿನ ಯೋಜನೆ:**

ಹೆಚ್ಚುವರಿ ಹಣಕಾಸಿನ ಯೋಜನೆಯಲ್ಲಿ ಈಗಾಗಲೇ 12736 ಫಲಾನುಭವಿಗಳನ್ನು ಸ್ಥಳೀಯ ಸ್ವ-ಸಹಾಯ ಸಂಘಗಳ ಮುಖಾಂತರ ಆಯ್ಕೆ ಮಾಡಿ ಅವರುಗಳಿಗೆ ವಿವಿಧ ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಯೋಜನೆಯಿಂದ ರೂ.980.15 ಲಕ್ಷ ಬಿಡುಗಡೆ ಮಾಡಲಾಗಿದೆ.

ಈಗ ಒಟ್ಟು 27 ಸಮೂಹ ಮಾರ್ಗದರ್ಶನ ತಂಡಗಳು ಹಾಗೂ 10 ಜಿಲ್ಲಾ ಮಾರ್ಗದರ್ಶನ ತಂಡಗಳು ಮೊದಲ ಹಂತದ ವಿಸ್ತರಣಾ ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿವೆ. ಪ್ರತಿ ಕೆರೆ ನಿರ್ವಹಣೆಗೆ 3 ತಿಂಗಳ ಯೋಜನಾ ಪೂರ್ವ ಹಂತ 4 ತಿಂಗಳ ಯೋಜನಾ ಹಂತ 18 ತಿಂಗಳ ಅನುಷ್ಠಾನ ಹಂತ ಹಾಗೂ 4 ತಿಂಗಳ ಅನುಷ್ಠಾನೋತ್ತರ ಹಂತವನ್ನು ನಿಗದಿಪಡಿಸಲಾಗಿದೆ.

**ಯೋಜನೆಯ ಅನುಷ್ಠಾನದಿಂದಾದ ಫಲಿತಾಂಶಗಳು:**

ಮೊದಲನೇ ಯೋಜನೆಯ ಸ್ವತಂತ್ರ ಮೌಲ್ಯಮಾಪನ ಸಲಹೆಗಾರರಾದ ಸಿ.ಇ.ಎಸ್ ರವರ ವರದಿಯನ್ನು ಆಧರಿಸಿ ಈ ಕೆಳಗಿನ ಫಲಿತಾಂಶಗಳನ್ನು ನೀಡಲಾಗಿದೆ:

1) ಶೇಕಡ 60 ರಿಂದ 90 ರಷ್ಟು ಕೆರೆಗಳಿಗೆ ನೀರಿನ ಒಳ ಹರಿವು ಹೆಚ್ಚಾಗಿದೆ.
2) ಮೀನುಗಾರಿಕೆ ಹೆಚ್ಚಿನ ನೀರಿನ ಲಭ್ಯತೆ
3) ಗೃಹ ಬಳಕೆ ಹಾಗೂ ಜಾನುವಾರುಗಳಿಗೆ ಹೆಚ್ಚಿನ ಕಾಲ ನೀರಿನ ಲಭ್ಯತೆ
4) ಅಂರ್ತಜಲ ಮಟ್ಟದಲ್ಲಿ ಹೆಚ್ಚಳ
5) ರಾಬಿ ಬೆಳೆಗೆ 3 ರಿಂದ ಐದು ತಿಂಗಳವರೆಗೆ ಹೆಚ್ಚುವರಿ ನೀರಿನ ಲಭ್ಯತೆ
6) ಬೋರ್‌ವೆಲ್ ನೀರಾವರಿ ಕೃಷಿಯಲ್ಲಿ ಶೇಕಡ 48 ರಷ್ಟು ಹೆಚ್ಚಳ ಕಂಡು ಬಂದಿದ್ದು, ಯೋಜನೆ ಪ್ರದೇಶದ ಕೆರೆಗಳಲ್ಲಿ ಶೇಕಡ 79 ರಷ್ಟು ಹೆಚ್ಚಳ.

**ಕಾರ್ಯನಿರ್ವಾಹಕ ನಿರ್ದೇಶಕರು**
ಜಲ ಸಂವರ್ಧನೆ ಯೋಜನಾ ಸಂಘ.